Publication : Prajavani
Date: June 20, 2014
Page No: 2
Edition: All

SARA Media Net
Simply communicate...

# ಉತ್ತರಗಳ ಹಂಗು ತೊರೆದ ಉತ್ಸಾಹಿಗಳ ಪಯಣ

'ಚಿತ್ರದ ಟೈಟಲ್ ನೋಡಿಯೇ ಎಷ್ಟೋ ಜನ ಕೇಳಿದರು, ಇದು ಆರ್ಟ್ ಫಿಲಮ್ಮಾ ಅಂತ... ಹಣ ಮಾಡುವುದೇ ಕಮರ್ಷಿಯಲ್ ಚಿತ್ರದ ಉದ್ದೇಶ ಎನ್ನುವುದಾದರೆ, ಇದು ಕಮರ್ಷಿಯಲ್ ಅಲ್ಲ' - ಇದು ಚೊಚ್ಚಿಲ ನಿರ್ದೇಶನದ ಪುಳಕ ಹಾಗೂ ಸಂಭ್ರಮದಲ್ಲಿರುವ ಅಪೂರ್ವ ಕಾಸರವಳ್ಳಿ ಅವರ ಸ್ಪಷ್ಟನೆ. ಅಪೂರ್ವ ಹೆಸರಾಂತ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರ ಪುತ್ರ. ಅಪ್ಪನ ಹಿನ್ನೆಲೆಯೇ ಕಾರಣದಿಂದಾಗಿಯೇ ಮಗನಿಗೆ ಎದುರಾದುದು- 'ನೀವು ಮಾಡುತ್ತಿರುವ ಚಿತ್ರ ಕಲಾತ್ಮಕವ್ರೋ, ಕಮರ್ಷಿಯಲ್ಲೋ?'.

ಕಿರುತೆರೆ ಧಾರಾವಾಹಿ ನಿರ್ದೇಶನ ಮಾಡಿ ಅನುಭವ ಪಡೆದುಕೊಂಡ ಬಳಿಕ ಅಪೂರ್ವ ಅವರು ಬೆಳ್ಳಿತೆರೆಯತ್ತ ಹೊರಳಿದ್ದಾರೆ. ಕಥೆಗಾರ ವಿಕ್ರಮ್ ಹತ್ವಾರ್ ಅವರ ಕಥೆಯೊಂದನ್ನು ಆಯ್ದುಕೊಂಡು 'ನಿರುತ್ತರ' ಎಂಬ ಚಿತ್ರ ನಿರ್ದೇಶನಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆ. ಸಿನಿಮಾದ ಹೆಸರೇ 'ಕಲಾತ್ಮಕ' ಆಗಿರುವುದರಿಂದ ಸಿನಿಮಾ ಕೂಡ ಹಾಗೆಯೇ ಇರಲಿದೆಯೇ? ಎಂಬುದು ಬಹುತೇಕ ಜನರ ಪ್ರಶ್ನೆಯಾಗಿತ್ತಂತೆ! ಅದನ್ನು ಅಪೂರ್ವ ಅವರೇ ಹೇಳಿಕೊಂಡರು. ಆ್ಯಕ್ಷನ್ ಹೊರತುಪಡಿಸಿ ರೊಮ್ಯಾನ್ಸ್, ಭಾವನೆ, ಹಾಸ್ಯ ಎಲ್ಲವೂ ಈ ಚಿತ್ರದಲ್ಲಿ ಇರಲಿದೆ ಎಂಬ ಭರವಸೆ ನೀಡಿದರು.

ನಾಲ್ಕು ಪಾತ್ರಗಳ ಮಧ್ಯೆ ಸುತ್ತುವ 'ನಿರುತ್ತರ' ಚಿತ್ರವು ಉತ್ತರ ಸಿಗದ ಹಲವಾರು ಪ್ರಶ್ನೆಗಳ ಮೊತ್ತವಾಗಿ ಮೂಡಿಬರಲಿದೆ. 50 ದಿನಗಳ ಕಾಲ ಬೆಂಗಳೂರು, ಹಿಮಾಚಲ ಪ್ರದೇಶ ಹಾಗೂ ರಾಜಾಸ್ತಾನದಲ್ಲಿ ಚಿತ್ರೀಕರಣ ನಡೆಸುವ ಯೋಜನೆಯಿದೆ.

ಹೋಮ್‌ಟೌನ್ ಪ್ರೊಡಕ್ಷನ್ ಮೂಲಕ 'ಇವೆಂಟ್ ಮ್ಯಾನೇಜ್‌ಮೆಂಟ್' ರಂಗದಲ್ಲಿ ಹಲವು ವರ್ಷಗಳಿಂದ ಸಕ್ರಿಯವಾಗಿರುವ ಅರವಿಂದ ರಾಮಣ್ಣ, ಮೊದಲ ಬಾರಿಗೆ ಸಿನಿಮಾಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಅಂದ ಹಾಗೆ ಇವರು ನಟಿ ಭಾವನಾ ಅವರ ಸಹೋದರ. 'ಇದೊಂದು ಮಧ್ಯಮ ಬಜೆಟ್‌ನ ಸಿನಿಮಾ. ಬೇರೆ ಬೇರೆ ವರ್ಗದ ಜನರಿಗೆ ಕಾರ್ಯಕ್ರಮ ಆಯೋಜನೆ ಮಾಡುವ ನಮ್ಮ ಸಂಸ್ಥೆಯು ಈಗ ಎಲ್ಲ ವರ್ಗದ ಜನರಿಗಾಗಿ ಈ ಚಿತ್ರ ನಿರ್ಮಾಣಕ್ಕೆ ಮುಂದಾಗಿದೆ' ಎಂದರು. ಸಿಡ್ನಿಯ ಯೂನಿವರ್ಸಿಟಿ ಆಫ್ ಟೆಕ್ನಾಲಜಿಯಲ್ಲಿ ಫಿಲಂ ಮೇಕಿಂಗ್ ಸ್ನಾತಕೋತ್ತರ ಪದವಿ ಪಡೆದಿರುವ ಅಪೂರ್ವ ನಿದೇಶನದ 'ನಿರುತ್ತರ', ಇತರ ಸಿನಿಮಾಕ್ಕಿಂತ ಭಿನ್ನವಾಗಿರಲಿದೆ ಎಂಬ ಆಶಾವಾದವನ್ನು ಗಿರೀಶ ಕಾಸರವಳ್ಳಿ ವ್ಯಕ್ತಪಡಿಸಿದರು.

'ಹಾಗೆ ಸುಮ್ಮನೇ' ಚಿತ್ರದಲ್ಲಿ ಅಭಿನಯಿಸಿ ಬಳಿಕ ಹಿಂದಿ ಧಾರಾವಾಹಿ ಲೋಕಕ್ಕೆ ಜಿಗಿದಿದ್ದ ಕಿರಣ್ ಶ್ರೀನಿವಾಸ್, ಕನ್ನಡ ಸಿನಿಮಾದಲ್ಲಿ ಅಭಿನಯಿಸುವ ಆಸೆಯಿಂದ ಮತ್ತೆ ಬಂದಿದ್ದಾರೆ. ಇವರ ಜತೆ ಐಂದ್ರಿತಾ ರೇ, ಭಾವನಾ ಇದ್ದಾರೆ. ಇನ್ನೊಬ್ಬ ನಾಯಕನಿಗಾಗಿ ಹುಡುಕಾಟ ನಡೆದಿದೆ. ಅಂತರರಾಷ್ಟ್ರೀಯ ಖ್ಯಾತಿ ಪಡೆದಿರುವ ಮುಂಬೈನ ನೀಲಾದ್ರಿ ಕುಮಾರ್ ಸಂಗೀತ ಸಂಯೋಜಿಸಲಿದ್ದಾರೆ. ಇದಕ್ಕೂ ಮೊದಲು ಬಸವನ-



ಅಪೂರ್ವ ಕಾಸರವಳ್ಳಿ



ಕಿರಣ್ ಶ್ರೀನಿವಾಸ್

ಗುಡಿಯಲ್ಲಿರುವ ದೊಡ್ಡ ಬಸವಣ್ಣನ ದೇವಸ್ಥಾನದಲ್ಲಿ ಚಿತ್ರದ ಮುಹೂರ್ತ ನಡೆಯಿತು. ಚಿತ್ರರಂಗದ ಹಲವು ಗಣ್ಯರು ಶುಭ ಕೋರಿದರು. ⌘